ಬಿ) ಮಾವಿನಹಳ್ಳಿ ಗ್ರಾಮಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ವರದಿಯೊಂದಿಗೆ ಚೆಕ್‌ಲಿಸ್ಟ್‌ನಲ್ಲಿ ಮಾಹಿತಿಯನ್ನು ದಿನಾಂಕ : 22–10–2013 ರಂದು ಮಾನ್ಯ ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ರವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ಸಿ) ಕಂದಾಯ ಇಲಾಖೆಯ ಆದೇಶದನ್ವಯ ಮುಂದಿನ ಕ್ರಮ ವಹಿಸಲಾಗುವುದು.

ಡಿ) ಕಂದಾಯ ಇಲಾಖೆಯ ಆದೇಶದನ್ವಯ ಮುಂದಿನ ಕ್ರಮ ವಹಿಸಲಾಗುವುದು.

ಈ) ಸಾಲುಕೊಪ್ಪಲು ಗ್ರಾಮಕ್ಕೆ ಸಂಬಂಧಿಸಿದಂತೆ, ಮಾನ್ಯ ಪ್ರಾದೇಶಿಕ ಆಯುಕ್ತರು, ಮೈಸೂರು ರವರಿಂದ ದಿನಾಂಕ : 05–05–2012 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಬೆಂಗಳೂರು ರವರಿಗೆ ವರದಿ ಸಲ್ಲಿಕೆಯಾಗಿದ್ದು, ಕಂದಾಯ ಇಲಾಖೆ ಆದೇಶದ ನಂತರ, ಸದರಿ ಆದೇಶದನ್ವಯ ಮುಂದಿನ ಕ್ರಮ ವಹಿಸಲಾಗುವುದು.

ಇ) ಕಂದಾಯ ಇಲಾಖೆಯ ಆದೇಶದನ್ವಯ ಮುಂದಿನ ಕ್ರಮ ವಹಿಸಲಾಗುವುದು.

ರಸ್ತೆಗಳಿಗೆ ಅರಣ್ಯ ಇಲಾಖೆಯ ಅನುದಾನ

ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಮಡಿಕೇರಿ)

ಅ) ಕೊಡಗು ಜಿಲ್ಲೆ ಕಡಮಕಲ್ಲು, ಕೊಚ್ಚುಲ ರಸ್ತೆಗಳನ್ನು ನಿರ್ಮಿಸಲು ಅರಣ್ಯ ಇಲಾಖೆಯಿಂದ ಅನುಮತಿ ಕೋರಿದ್ದರೂ ಸಹ ಈವರೆವಿಗೂ ಅನುಮತಿ ನೀಡದೆ ಇದಕ್ಕೆ ವಿಳಂಬವಾಗಲು ಕಾರಣವೇನು?

ಆ) ಯಾವಾಗ ಅನುಮತಿ ನೀಡಲಾಗುವುದು ;

ಇ) ಎಂದಿನಿಂದ ಕಾಮಗಾರಿ ಪ್ರಾರಂಭ ಮಾಡಲಾಗುವುದು ?

ಶ್ರೀ ಬಿ.ರಮಾನಾಥ್ ರೈ (ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು)

ಅ) ಕೊಡಗು ವೃತ್ತ ವ್ಯಾಪ್ತಿಯಲ್ಲಿ ಬರುವ ಮಡಿಕೇರಿ ವನ್ಯಜೀವಿ ವಿಭಾಗ ಪುಷ್ಪಗಿರಿ ವಲಯದಲ್ಲಿ ಬರುವ ಮಡಿಕೇರಿ ಕಡಮಕಲ್ಲು–ಸುಬ್ರಹ್ಮಣ್ಯ ರಸ್ತೆಯನ್ನು 16.00.ಕಿ.ಮಿ. ಯಿಂದ 27.00ಕಿ.ಮೀ ವರೆಗೆ (ಪಣಚಲು ಕಡಮಕಲ್ಲು) ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಸದರಿ ವನ್ಯಧಾಮ 13.20 ಹೆ.ಅರಣ್ಯ ಭೂಮಿಯನ್ನು ವರ್ಗಾಯಿಸಲು ಅರಣ್ಯ ಸಂರಕ್ಷಣಾ ಕಾಯಿದೆ 1980ರಡಿಯಲ್ಲಿ ನಿಗದಿತ ನಮೂನೆಗಳಲ್ಲಿ ಪ್ರಸ್ತಾವನೆಯನ್ನು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕೊಡಗು ವೃತ್ತ ಮಡಿಕೇರಿ ಇವರ ಪತ್ರ ಸಂಖ್ಯೆ : ಭೂಮಿ/ಕ.ಸು ರಸ್ತೆ /ವಿವ–17/2010–11, ದಿನಾಂಕ: 26.02.2011ರಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿಗೆ ಸಲ್ಲಿಸಿರುತ್ತಾರೆ. ನಂತರ ಮೇಲ್ಕಂಡ ಉದ್ದೇಶಕ್ಕಾಗಿ ವನ್ಯಧಾಮದ ವ್ಯಾಪ್ತಿಯ: ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಗಳಿಗೆ ವರ್ಗಾಯಿಸುವ ಬಗ್ಗೆ ವನ್ಯಜೀವಿ ಸಂರಕ್ಷಣಾ ಕಾಯಿದೆ 1972 ರಡಿಯಲ್ಲಿ ರಾಷ್ಟ್ರೀಯ ವನ್ಯ ಜೀವಿ ಮಂಡಳಿಯ ಅನುಮೋದನೆಯನ್ನು ಪಡೆಯಲು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದ ದಿನಾಂಕ: 19/12/2012 ರ ಪತ್ರ ಸಂಖ್ಯೆ: ಎಫ್.ನಂ. 610/2011 ಡಬ್ಲೂ.ಎಲ್ ರಲ್ಲಿ ಹೊರಡಿಸಿರುವ (ನಿರ್ದೇಶನಗಳನ್ವಯ ನಿಗಧಿತ ನಮೂನೆಗಳಲ್ಲಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಬಳಕೆದಾರ ಸಂಸ್ಥೆಯಾದ (User Agency ಕೊಡಗು ವಿಭಾಗದ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಡಿಕೇರಿ, ಕೊಡಗು ಜಿಲ್ಲೆ ಇವರಿಗೆ ಪತ್ರ ವ್ಯವಹರಿಸುತ್ತಿದ್ದು, ಸದರಿಯವರಿಂದ ಪ್ರಸ್ತಾವನೆ ಬಂದಿರುವುದಿಲ್ಲ. ಮುಂದುವರೆದು ಕೊಚ್ಚುಲ ಎನ್ನುವ ಹೆಸರಿನ ರಸ್ತೆ ನಿರ್ಮಾಣದ ಪ್ರಸ್ತಾವನೆಯು ಕೊಡಗು ವೃತ್ತದ ವ್ಯಾಪ್ತಿಯಲ್ಲಿ ಇರುವುದಿಲ್ಲ.

ಆ) ಮೇಲಿನಂತೆ